ಶ್ರೀ ಎಸ್.ಎಂ. ಕೃಷ್ಣ: ನಾನಿನ್ನೂ ಪಂಚಾಯತ್‌ರಾಜ್‌ನಲ್ಲೇ ಇದ್ದೆ ನೀವು ಹೇಳುವುದು ಗೊತ್ತಿಲ್ಲ, ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ಸೋಮಶೇಖರ್: ಮುಖ್ಯಮಂತ್ರಿಗಳು ಎಲ್ಲವನ್ನೂ ಸಮರ್ಥನೆ ಮಾಡಿಕೊಂಡು ಹೋಗುತ್ತಿದ್ದಾರೆ ನನ್ನದೇನೂ ಅಭ್ಯಂತರವಿಲ್ಲ ಸಂತೋಷ. ಏಕೆಂದರೆ ಅವರು ಬಹಳ ಹಿರಿಯರು ಅನುಭವಶಾಲಿಗಳು, ಕಾಂಗ್ರೆಸಿನವರನ್ನೇ ಕರೆಸಬೇಕು ಅಂತಿದ್ದಿದ್ದರೆ ನನ್ನ ಅನಿಸಿಕೆ ಮಣಿಶಂಕರ ಅಯ್ಯರ್‌ರವರನ್ನು ಕರೆಸಬಹುದಿತ್ತು ಈ ವಿಚಾರದಲ್ಲಿ ಆಗ ನಾವು ಪ್ರಶ್ನೆ ಮಾಡಲು ಆಗುತ್ತಿರಲಿಲ್ಲ, ಅಥವಾ ಈಗಿನ HRD ಮಿನಿಸ್ಟರನ್ನಾದರೂ ಕರೆಸಬಹುದಿತ್ತು. ನೀವು ಕರೆಸಿದ್ದಿರಿ ನಾವು ಕರೆಸಿದೆವು ಅಂತ ಹೇಳಬಹುದಿತ್ತು, ಆದರೆ ಅದನ್ನು ಬಿಟ್ಟು ವಿರೋಧ ಪಕ್ಷದ ನಾಯಕಿ ಅಂತ ಕರೆಸಿದಿರಿ ಅದಕ್ಕೇ, ಅಮೇಲೆ ಟಿಎ ಡಿಎ ಎಲ್ಲಾ ಕೊಟ್ಟು ಮಾಡಿದ್ದೀರಲ್ಲಾ.

ಶ್ರೀ ಎಸ್.ಎಂ. ಕೃಷ್ಣ: ಸೋಮಶೇಖರರಿಗೆ ಬೇಜಾರು ಮಾಡಲು ಇಷ್ಟಪಡುವುದಿಲ್ಲ. ನಿಮ್ಮ ಬಾಮಿಲೆಗೆ ಮಣಿ ಶಂಕರ ಅಯ್ಯರರನ್ನು ನಾವು ಖಾಸತಿ ಮಟ್ಟದಲ್ಲಿ ಕರೆಸಿದ್ದೆವು, ಒಂದು ದಿವಸ ಮೂರಾ ಬೆಳಿಗ್ಗೆ 9--30 ಗಂಟೆಗೆ ನಾವು ಹೋದವರು ರಾತ್ರಿ 9 ಗಂಟೆಯವರೆಗೆ ಈ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಅತ್ಯಂತ ತೀವ್ರತರವಾದ ಗಂಭೀರವಾದ ಚರ್ಚೆಯನ್ನು ಚೌಡಯ್ಯ ಸ್ಮಾರಕ ಹಾಲ್‌ನಲ್ಲಿ ಮಾಡಿದೆವು, ಹೊರಗಡೆ ಕೂಡ ನಾವು ಟೆಲಿವಿಷನ್ ಇಟ್ಟು ಮಾಡಿದೆವು. ಏಕೆಂದರೆ it was over crowded. ಆಗ ನಮಗೆ ಈ ಚಿಂತನೆ ಬಂತು. ಏನು ಆ ಚಿಂತನೆ, ಮಣಿಶಂಕರ್ ಅಯ್ಯರ್‌ರವರು ಆ ಚಿಂತನೆಯನ್ನು ನಮ್ಮ ಮೇಲೆ ಹಾಕಿದರು. ಇಡೀ ರಾಜ್ಯದಲ್ಲೇ ಅದನ್ನು ಕರೆಯಿರಿ ಎಂದು ಹೇಳಿ. ಮಣಿಶಂಕರ್ ಅಯ್ಯರ್‌ರವರು ಆವತ್ತು ಕಾರಣಾಂತರಗಳಿಂದ ಅಲ್ಲಿಗೆ ಬರಲಿಕ್ಕೆ ಆಗಲಿಲ್ಲ. ಅವರಿಗೆ ಬೇರೆ ಯಾವುದೋ ಒಂದು ಮಹತ್ತರವಾದ ಕೆಲಸವಿದ್ದುದರಿಂದ ಅವರಿಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ ಅಷ್ಟೇನೇ.

ಶ್ರೀ ಡಿ.ಆರ್. ಪಾಟೀಲ್: ದೆಹಲಿ ಮಟ್ಟದಲ್ಲಿ ಕೆಲಸ ಮಾಡುವಂಥ ಯಾವ ರಾಜಕೀಯ ನಾಯಕರಿಗೂ ಈ ಪಂಚಾಯತ್ decentralisation ಬಗ್ಗೆ ಸೋನಿಯಾಗಾಂಧಿಯವರಿಗೆ ಇರುವಷ್ಟು ಕಳಕಳಿ ಯಾರಿಗೂ ಇಲ್ಲ. including Prime Minister I tell you.

ಶ್ರೀ ಆರಗ ಜ್ಞಾನೇಂದ್ರ: ನಿಮಗೆ ನೀವೇ ಸರ್ಟಿಫಿಕೇಟನ್ನು ಕೊಟ್ಟುಕೊಂಡುಬಿಟ್ಟರೆ ಹೇಗೆ?

ಶ್ರೀ ಡಿ.ಆರ್. ಪಾಟೀಲ್: ನೀವು ಏನು ಮಾಡಿದ್ದೀರಿ ಎಂದು ಹೇಳಿ. Decentralisation ಬಗ್ಗೆ ನೀವೇನು ಮಾಡಿದ್ದೀರಿ ಎಂದು ಹೇಳಿ. ನೀವು ಏನು ಮಾಡಿದ್ದೀರಿ ಹೇಳಿ ಸ್ವಾಮಿ.

ಛೇರ್ಮನ್: ಈಗ ಸದನವನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರಲಾಗುತ್ತದೆ.

(ಸದನವು 2 ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಭೋಜನ ವಿರಾಮದ ನಂತರ ಮುನಃ 3.40ಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

7. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಅನುಮೋದನೆಗೆ ತೆಗೆದುಕೊಳ್ಳುವ ಬಗ್ಗೆ

ಅಧ್ಯಕ್ಷರು: ಸೋಮಶೇಖರ್‌ರವರೇ, ಒಂದೆರಡು ನಿಮಿಷ ಅವರು ಅರ್ಜೆಂಟ್ ಆಗಿ ಹೋಗಬೇಕಂತೆ.

†**ಶ್ರೀ ಬಿ. ಸೋಮಶೇಖರ್:** ಇದು ಬಹಳ ಮುಖ್ಯವಾದ ಬಿಲ್ ಈಗ ತಾನೇ ಇಟ್ಟಿದ್ದಾರೆ. ಯಾರೂ ಓದಿಲ್ಲ, ಈ ಪದ್ಧತಿ ಸರಿಯಲ್ಲ. ಈಗ ತಂದಿಟ್ಟು, ಅದು ಬಹಳ ಮುಖ್ಯವಾದ ಬಿಲ್ ಏನೂ ಓದದೆ, ನಾವು ವಿರೋಧ ಪಕ್ಷದವರು ಅದಕ್ಕೆ ರಿ ಆ್ಯಕ್ಷನ್ ಕೊಡದೆ, ಪಾಸ್ ಮಾಡುವುದು ಎಂದರೆ ಹೇಗೆ? ಕನಿಷ್ಟ ಹಿಂದಿನ ದಿನವಾದರು ಕೊಡಬೇಕಾಗಿತ್ತು. ನಿನ್ನೆಯಾದರೂ ಕಳುಹಿಸಬೇಕಾಗಿತ್ತು.

SRI D.B. INAMDAR: It is a creation of an Authority for planned development.

ಶ್ರೀ ಎನ್. ಸುರೇಶ್ ಕುಮಾರ್: ಮಾನ್ಯ ಸಭಾಧ್ಯಕ್ಷರೆ, ಅವರು ಇವತ್ತು ಮಂಡಿಸಲಿ, ಸೋಮಶೇಖರ್‌ರವರು ಇದರ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿಯೂ ಬಿಲ್ ಬಂದಾಗ ನಾವು ಅವರ ಹತ್ತಿರ ವಿಚಾರಗಳನ್ನು ಮಂಡಿಸಿ ಅವರಿಂದ ಉತ್ತರ ತೆಗೆದುಕೊಳ್ಳಬೇಕು. ಬಿಲ್ಲನ್ನು ಇವತ್ತು ಮಂಡಿಸಲಿ ನಾಳೆ ಚರ್ಚೆ ಮಾಡೋಣ. ಈ ಫಳಿಗೆಗೆ ಇದು ಇಲ್ಲಿ ಬಂದಿದೆ. ನಾನು ಅವರ ಭಾಷಣವನ್ನು ಆಲಿಸುತ್ತಿದ್ದೆ, ಅವರು ಯಾವ ಕಂಪನಿ ಬಗ್ಗೆ ಬಹಳ ಸ್ಪೆಸಿಫಿಕ್ಕಾಗಿ ಹೇಳಿದರು ಆ ಕಂಪನಿ ವಿಚಾರ ಇಲ್ಲಿ ಇದೆ.

SRI D.B. INAMDAR: They are the people who have planned it. Thay are not the people who are going to do anything. Except planning nothing else has been done here.

ಶ್ರೀ ಎಸ್. ಸುರೇಶ್ ಕುಮಾರ್: ಇದು ಅಮೆಂಡ್‌ಮೆಂಟ್ ಅಲ್ಲ. ಇದು ಹೊಸ ಬಿಲ್. This is a bill, new bill.

ಶ್ರೀ ಡಿ.ಬಿ. ಇನಾಂದಾರ್: ಅನ್‌ಪ್ಲ್ಯಾನ್ಡ್ ಡೆವಲಪ್‌ಮೆಂಟ್ ಆಗಬಾರದು ಎನ್ನುತಕ್ಕಂತಹ ದೃಷ್ಟಿಯಿಂದ ತಂದಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಮೆರಿಟ್ಸ್ ಬಗ್ಗೆ ನಾವು ಮಾತನಾಡುತ್ತಿಲ್ಲ. ಹೊಸ ಬಿಲ್ ಬಗ್ಗೆ ಚರ್ಚೆ ಮಾಡದೆ ನಾವು ಒಪ್ಪಿಗೆ ಕೊಟ್ಟು ಬಿಟ್ಟರೆ ಜನ ಏನನ್ನುತ್ತಾರೆ?

ಶ್ರೀ ಬಿ. ಸೋಮಶೇಖರ್: ನೀವು ಮೊದಲೇ ತಂದಿದ್ದರೆ ನಮಗೆ ಡೌಟ್ ಬರುತ್ತಿರಲಿಲ್ಲ. ಕೊನೆಯಲ್ಲಿ ಸದನ ಮುಗಿಯುವಾಗ ತಂದಿರುವುದರಿಂದ ಅನುಮಾನ ಬರುತ್ತಿದೆ.

ಶ್ರೀ ಡಿ.ಬಿ. ಇನಾಂದಾರ್: ಇದರಲ್ಲಿ ಅನುಮಾನ ಪಡಬೇಕಾಗಿಲ್ಲ. It is creation of an Authority, that is all.

ಶ್ರೀ ಎಸ್. ಸುರೇಶ್ ಕುಮಾರ್: ಈ ಬಿಲ್ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಡಿ.ಬಿ. ಇನಾಂದಾರ್: ಈಗ ಚರ್ಚೆ ಮಾಡಿ ನಾನು ಚರ್ಚೆ ಬೇಡವೆಂದು ಹೇಳುತ್ತಿಲ್ಲ.

ಶ್ರೀ ಸುರೇಶ್ ಕುಮಾರ್: ಎಪಿಎಂಸಿ ಬಿಲ್ ಹೇಗೆ ಪಾಸ್ ಮಾಡಿಕೊಂಡಿರಿ ಹಾಗೆಯೇ ಪಾಸ್ ಮಾಡಿಕೊಳ್ಳಿ.

SRI D.B. INAMDAR: We have to take it to let that authority work. It is going to send a right message to the industry.

ಅಧ್ಯಕ್ಷರು: ಅವರು ಹೇಳುವುದು ಕೌನ್ಸಿಲ್‌ನಲ್ಲಿ ಪಾಸ್ ಆಗಬೇಕೆಂದು.

ಶ್ರೀ ಎಸ್. ಸುರೇಶ್‌ಕುಮಾರ್: ಸರ್ಕಾರ ಇನ್ನು ಅಲರ್ಟ್ ಆಗಿರಬೇಕಾಗಿತ್ತು. ಇವತ್ತು ಮೂರನೇ ದಿವಸ.

ಶ್ರೀ ಡಿ.ಬಿ. ಇನಾಂದಾರ್: ಮಾನ್ಯ ಅಧ್ಯಕ್ಷರೆ, ಐಟಿ ಸೆಕ್ಟಾರ್ This is the sector that is growing.

ಅಧ್ಯಕ್ಷರು: ಇನಾಂದಾರ್‌ರವರೇ, ನೀವು ಬಿಲ್ ಮಂಡಿಸಿ, ನೋಡೋಣ ಅಷ್ಟರಲ್ಲಿ ಅವರೇನಾದರೂ ಮನಸ್ಸು ಬದಲಾವಣೆ ಮಾಡುವುದ್ದಾದರೆ ಮಾಡಲಿ.

8. ಶಾಸನ ರಚನೆ

ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ, 2004 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

"2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ. 2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ

ಶ್ರೀ ಎಸ್. ಸುರೇಶ್ ಕುಮಾರ್: ಸನ್ಮಾನ್ಯ ಅಧ್ಯಕ್ಷರೇ, I am a point of order. ನಡವಳಿಕೆ ನಿಯಮಗಳ ಪ್ರಕಾರ, ನಿಯಮ 84ರ ಪ್ರಕಾರ ಸದಸ್ಯನ ಉಪಯೋಗಕ್ಕಾಗಿ ವಿಧೇಯಕ ಪ್ರತಿಗಳನ್ನು ಒದಗಿಸದೆ ಹೊರತು ಅಂತಹ ಯಾವುದೇ ಪ್ರಸ್ತಾವನೆ ಮಾಡತಕ್ಕದ್ದಲ್ಲ, ಮತ್ತು ಪ್ರಸ್ತಾವವನ್ನು ಮಂಡಿಸುವ ಎರಡು ದಿನಗಳ ಮುಂಚೆ ವಿಧೇಯಕದ ಪ್ರತಿಗಳನ್ನು ಒದಗಿಸಬೇಕೆಂದು ಇದೆ.

ಅಧ್ಯಕ್ಷರು: ತಾವೇ ಹೇಳಿದಿರಿ ಇವತ್ತು ಮಂಡಿಸಿ ಎಂದು.

ಶ್ರೀ ಎಸ್. ಸುರೇಶ್ ಕುಮಾರ್: ಮಂಡಿಸುವುದು ಮಾತ್ರವಷ್ಟೆ. ನಾಳೆ ತೆಗೆದುಕೊಳ್ಳಿ. ಅವರು ಈಗಲೇ ಹೊರಟುಬಿಟ್ಟರೆ? ಅದರ ಬಗ್ಗೆ ನಾವು ಓದಬೇಕಾಗಿದೆ. We are answerable.

ಅಧ್ಯಕ್ಷರು: ಇನಾಂದಾರ್‌ರವರೇ, ನಾಳೆ ಪಾಸ್ ಮಾಡಿಕೊಳ್ಳೋಣ.